

ದುಬೈನಲ್ಲಿ ಖರ್ಜೂರ ಮರದ ಆಕೃತಿಯಲ್ಲಿ ಕಡಲೊಳಗೆ ಕಟ್ಟಿದ ಬಂಗಲೆಗಳು

ತುಸುವೇ ತೇವಾಂಶವಿದೆ ಎಂದರೆ ಸಾಕು, ಇವುಗಳ ಬೇರುಗಳು ಆಳವಾಗಿ ನುಗ್ಗಿ ಹೋಗಿ ಜಲವನ್ನು ಮುಟ್ಟುತ್ತವೆ. ಬಾಗ್ದಾದಿನ ಪಾಳುಬಿದ್ದ ಓಣಿಗಳಲ್ಲಿ ಯುದ್ಧದ ಕಾರಣದಿಂದ, ಕೆಲವು ಕಡೆ ಖರ್ಜೂರದ ಗಿಡಗಳ ತಲೆಗಳು ಉರುಳಿ, ಸುಟ್ಟ ಕಾಂಡಗಳು, ಯುದ್ಧ ಸಂಸ್ಕೃತಿಯ ಇತಿಹಾಸದ ಮೂಕಸಾಕ್ಷಿಯಂತೆ ನಿಂತಿದ್ದವು. ನೋಡಲು ಸಾಮಾನ್ಯ ಚಹರೆಯ ಮರ ಮತ್ತು ಫಲವು, ಒಂದು ಪ್ರದೇಶದ ಸಂಸ್ಕೃತಿಯೊಳಗೆ ಇಷ್ಟು ಆಳವಾಗಿ ಬೇರುತಳೆಯಬಹುದೇ ಎಂದು ಸೋಜಿಗವಾಗುತ್ತದೆ.

ನಾವು ಅತ್ಯಂತ ಉತ್ಕೃಷ್ಟವಾದ ತೋಟಗಳನ್ನು ನೋಡಿದ್ದು ಅರೇಬಿಯಾದ ಅಲುಲಾದಲ್ಲಿ. ಅಲುಲಾ ವಿಶ್ವಪರಂಪರೆಯ ಸ್ಮಾರಕಗಳಿರುವ ಜಾಗ. ಅಲ್ಲಿನ ಮರುಭೂಮಿಯಲ್ಲಿ ಮರಳಬಂಡೆಗಳಲ್ಲಿ ಕೊರೆಯಲಾದ ಪ್ರಾಚೀನ ಅರಬ್ ಬುಡಕಟ್ಟು ನಾಯಕರ ಸಮಾಧಿಗಳಿವೆ. ನಾವು ಅಲ್ಲಿ ಸೊಂಪಾಗಿ ಬೆಳೆದ ಖರ್ಜೂರದ ತೋಟವೊಂದರ ಬದಿ ಕಾರನ್ನು ನಿಲ್ಲಿಸಿ, ಗೊಂಚಲು ಗೊಂಚಲು ತೂಗಿರುವ ಖರ್ಜೂರದ ಗಿಡಗಳ ಪಟ ತೆಗೆಯುತ್ತಿದ್ದೆವು. ಅದನ್ನು ಗಮನಿಸಿದ ತೋಟದ ಮಾಲೀಕನು 'ಬನ್ನಿ, ಒಳಗೆ ಬಂದು ತೋಟ ನೋಡಬಹುದು' ಎಂದು ಆಹ್ವಾನಿಸಿದನು. ನಮ್ಮ ತಂಡವು ಮಾವಿನ ತೋಟಕ್ಕೆ ದಾಳಿ ಮಾಡುವ ಕಪಿಸೈನದಂತೆ ನುಗ್ಗಿತು. ಧ್ವಜಸ್ತಂಭದಂತೆ ಆಗಸಕ್ಕೇರಿದ ಕಾಂಡವು ಗರಿಗಳ ಮುಟ್ಟಾಳೆ ತೆಗೆದ ಗುರುತುಗಳಿಂದ ಚಿಪ್ಪುಹಂದಿಯ ಕವಚಗಳಿಂದ ಮಾಡಿದಂತಿತ್ತು. ಅದರ ತುದಿಗೆ ಹಸಿರು ಕಿರೀಟವಿಟ್ಟಂತೆ ಖರ್ಜೂರದ ಗರಿಗಳು. ಅವು ಮಳೆಗಾಗಿ ಪ್ರಾರ್ಥನೆ ಮಾಡುವವರಂತೆ ಆಗಸಕ್ಕೆ ಕೈಚಾಚಿ ದಶದಿಕ್ಕುಗಳಿಗೂ ಹರಡಿದ್ದವು. ಅವು ಅಲ್ಲಾಡಿದಾಗ ಕುಣಿವ ನವಿಲಿನ ಗರಿಗಳಂತೆ ತೋರುತ್ತಿದ್ದವು. ದಬ್ಬಳದಂತಹ ಕಠೋರ ಮುಳ್ಳುಗರಿಗಳ ಕಂಕುಳಲ್ಲಿ ಹಳದಿ ಕೆಂಪು ಕಪ್ಪು ಹಣ್ಣಿನ ಗೊಂಚಲುಗಳು ಇಳಿಬಿದ್ದಿದ್ದವು. ಪ್ರತಿಮರದಲ್ಲೂ ಹತ್ತು–ಹದಿನೈದು ಇದ್ದ ಗೊಂಚಲು, ಸೀಮೆಹಸುವಿನ ಕೆಚ್ಚಲಿನಂತೆ ಜೋತುಬಿದ್ದಿದ್ದವು. ಅತಿ ಹಣ್ಣಾದ ಕಡೆ ಕಪ್ಪಾಗಿ ಅವು ಜೇನುಹುಟ್ಟಿನಂತೆ ತೋರುತ್ತಿದ್ದವು. ಸಮಸ್ತ ಮರುಭೂಮಿಯ ಹಕ್ಕಿಗಳೆಲ್ಲ ಇಲ್ಲೇ ಬೀಡುಬಿಟ್ಟಿವೆ ಎಂಬಂತೆ ತೋಟವು ಚಿಲಿಪಿಲಿ ನಾದದಿಂದ ತುಂಬಿತ್ತು. ಹಕ್ಕಿಗಳು ತಿಂದು ಹಣ್ಣನ್ನು ನೆಲಕ್ಕೆ ಸೂರೆಹೊಡೆದಿದ್ದವು. ಉಸುಕಿನಲ್ಲಿ ಬಿದ್ದಿದ್ದ ಹಣ್ಣುಗಳನ್ನು ನಾನು ಆರಿಸಿಕೊಂಡೆ. ತೋಟದಲ್ಲಿದ್ದ ಬಂಗಾಳಿ ಮಾಲಿಗಳು, 'ಆರಿಸಿಕೊಳ್ಳಬೇಡಿ. ಅದರಲ್ಲಿ ಮರಳಿನ ಕಣಗಳಿವೆ. ನಿಮಗೆ ಒಳ್ಳೆಯ ಹಣ್ಣು ಕೊಡುತ್ತೇವೆ' ಎಂದು ದೊಡ್ಡದೊಂದು ಪ್ಲಾಸ್ಟಿಕ್ ಚೀಲದಲ್ಲಿ ಐದಾರು ಕೆಜಿಯಷ್ಟು ತುಂಬಿಕೊಟ್ಟರು. ಹಣ ಕೊಡಲು ಹೋದರೆ ಸ್ವೀಕರಿಸಲಿಲ್ಲ.

ಈ ಖರ್ಜೂರ ತೋಟದಲ್ಲಿ ನಾವು ಹೋದಾಗ ಮಧ್ಯಾಹ್ನ. ತೋಟದ ಕೆಲಸಗಾರರೆಲ್ಲ ಸೊಳ್ಳೆ ಪರದೆ ಕಟ್ಟಿಕೊಂಡು ಅದರೊಳಗೆ ಋಷಿಗಳಂತೆ ಕುಳಿತಿದ್ದರು. ಯಾಕೆಂದು ಕೇಳಿದೆ. ಹಣ್ಣಿನ ಸಿಹಿಗೆಂದು ಬರುವ ನೊಣಗಳು, ಊಟ ಮಾಡುವುದಕ್ಕೂ ಬಿಡುವುದಿಲ್ಲ. ಈಗ ನಮ್ಮ ಊಟ ಬರುವ ಹೊತ್ತು. ನಾವು ಮಲಗುವುದು ಮಾತ್ರವಲ್ಲ, ಉಣ್ಣುವುದು ಕೂಡ ಸೊಳ್ಳೆಪರದೆಯೊಳಗೆ' ಎಂದರು. ಸಿಹಿಯಾದ ಖರ್ಜೂರದ ಹಿಂದೆ ಭಾರತೀಯ–ಬಾಂಗ್ಲಾದೇಶಿ ಕಾರ್ಮಿಕರಿಗೆ ಶ್ರಮ ಮಾತ್ರವಲ್ಲ, ಸಂಸಾರವನ್ನು ಊರಲ್ಲಿ ಬಿಟ್ಟು ಒಂಟಿಬಾಳನ್ನು ಸವೆಸುತ್ತಿರುವ ಕಹಿಕಷ್ಟಗಳೂ ಇದ್ದಂತೆ ತೋರಿತು.

ಒಂದು ದಿನ, ಮಗಳು ಸೀಮಾ ಮತ್ತು ಆಕೆಯ ಗಂಡನೂ ಸೇರಿ, ನನಗೂ ಬಾನುಗೂ ರಿಯಾದ್ ಶಹರದಲ್ಲಿರುವ ಪ್ರಸಿದ್ಧ ಖರ್ಜೂರದ ಸಗಟು ಮಾರುಕಟ್ಟೆಗೆ ಕರೆದೊಯ್ದರು. ಅದೊಂದು ಕಿಲೋಮೀಟರ್ ಉದ್ದದ ಖರ್ಜೂರದ ಗೋದಾಮುಗಳ ಸಾಲು. ಅಲ್ಲಿ ಹದಿನೈದಕ್ಕಿಂತ ಹೆಚ್ಚು ಬಗೆಯ ಖರ್ಜೂರಗಳಿದ್ದವು. ಕಂದು ಕೆಂಪು ಮರಳುಗೆಂಪು ಹಳದಿ ಬಣ್ಣದ ಹಣ್ಣುಗಳು. ಬೆಲ್ಲದ ಮುಟಿಗೆಯಂತಿದ್ದ ಕೆಲವಕ್ಕೆ ಮೈಯೆಲ್ಲ ನಿರಿಗೆಗಳು. ಮರಳುಬಣ್ಣದ ಗಿಡ್ಡನೆಯ ಸುಕ್ರಿ ಖರ್ಜೂರವು ನೋಡಲು ಏನೇನೂ ಚಂದವಿರಲಿಲ್ಲ. ಆದರೆ ಬೆಲ್ಲದುಂಡೆ ಕಡಿದಂತೆ ಸಿಹಿಯಾಗಿದ್ದ ಅದಕ್ಕೆ ದುಬಾರಿ ಬೆಲೆ. ಮುರುಟಿದ ಕಪ್ಪನೆಯ ದ್ರಾಕ್ಷಿಯಂತಿದ್ದ ಮದೀನಾದ ಅಜ್ವಾ ಖರ್ಜೂರವೂ ತುಟ್ಟಿಯಾಗಿತ್ತು. ಅರಬಸ್ಥಾನದ ಅನೇಕ ಪಟ್ಟಣಗಳಲ್ಲಿ ಖರ್ಜೂರದ ಮೇಳ ನಡೆಯುತ್ತದೆ. ಇವುಗಳಲ್ಲಿ ಖಸ್ಸೀಂ ಪಟ್ಟಣದ ಖರ್ಜೂರದ ಮೇಳವೂ ಪ್ರಸಿದ್ಧವಾಗಿದೆ. ಮುಂದಿನ ಸಲ ಬಂದರೆ ಖಸ್ಸೀಂನ ಖರ್ಜೂರದ ಜಾತ್ರೆಗೆ ಹೋಗೋಣ ಎಂದು ಸೀಮಾ ಭರವಸೆ ಕೊಟ್ಟಳು.

ಪ್ರತಿಕ್ರಿಯಿಸಿ: **feedback@sudha.co.in**


